


ಎಡದಿಂದ ಬಲಕ್ಕೆ :

1. ಶಾಂತ ಸ್ವಭಾವವಿದ್ದರಷ್ಟೇ ಸದಾ ಆನಂದ (3)
3. ವೀರನಿಗಾದ ಗತಿ ಕಂಡು ಪರಿತ್ಯಕ್ತ ಭಾವ (3)
4. ಹೂವಿನ ಹಾರ ಧರಿಸಿಯೇ ನಡೆಯಿತು, ಸಂತಸದ ಸುತ್ತಾಟ (3)
6. ಶಂಭುವಿನ ದಯೆಯಿಂದ ಮಂಗಳಕರ ಆರಂಭ (4)
7. ಅವಾಂತರಕ್ಕೆ ಕಾರಣನಾದವ ಇದೇ ಹಂಚಿಕೆದಾರ (4)
9. ಕಲ್ಲಿನಲ್ಲಿ ಕೆತ್ತನೆ ಮಾಡುವ ಲಲಿತ ವಿದ್ಯೆ ಕಲಿತವ (4)
11. ಸಂಪಾದನೆಯ ಸ್ವಲ್ಪ ಭಾಗವನ್ನು ದಾನ ಮಾಡುವ ವಾಡಿಕೆ ಇದೆ (4)
15. ಮುರುಗೇಶನ ಮನೆಯಲ್ಲಿ ಲಕ್ಷ್ಮೀಪತಿಯೂ ಇದ್ದಾನೆಯೇ ? (3)
16. ರಾಧಾ ರಮಣನ ಮೈಯಲ್ಲಿರುವುದೂ ಅದೇ ನೆತ್ತರೇ ತಾನೇ ? (3)
17. ಮಳೆಯ ಆಗಮನಕ್ಕೆ ಕಾಯುತ್ತಿರುವ ಜೋಡಿ ನೋಡಿ (3)

ಮೇಲಿಂದ ಕೆಳಕ್ಕೆ :

1. ರಾಶಿ ರಾಶಿ ಸಂಡಿಗೆಯ ಜೊತೆಗೇ ..... (3)
2. ವಿಸ್ತೃತ ಅಧ್ಯಯನಕ್ಕೆ ಗುರಿಯಾದದ್ದು ನಮ್ಮ ಸೂರ್ಯನೇ ? (3)
3. ಔಷಧವೂ ಕಲಬೆರಕೆಗೊಂಡಿದೆ ಎಂದರೆ ದುಃಖವಾಗದೇ ? (3)
5. ಜಾತ್ರೆಗಳಲ್ಲೂ ಸಿಗಬಹುದೇನು ಶುದ್ಧ ಬೆಳ್ಳಿ ? (3)
6. ಶೋಕಿಲಾಲನ ಮನೆಯಲ್ಲಿ ಇದೆಂಥ ನಾಯಿ ? (3)
8. ಕಟ್ಟ ಕಡೆಯಲ್ಲಿ ಕೊಂಡು ತಂದದ್ದು ಇದೇ ಹಂಡೆ (3)
10. ಕೂತರೂ ನಿಂತರೂ ಸದಾ ಏಕಿಷ್ಟು ಅವಸರ ? (3)
12. ಪಹರೆ ಕಾರ್ಯದಲ್ಲಿದ್ದವನಿಗೆ ಏಟಿನ ಮೇಲೆ ಏಟು (3)
13. ಎಲ್ಲ ಜಲಾಶಯಗಳೂ ಭರ್ತಿಯಾಗಲೆಂಬುದೇ ಎಲ್ಲರ ಇಚ್ಛೆ (3)
14. ಮುರುಳಿಯ ನಾದಕ್ಕೆ ಮನಸೋತು ಹುಚ್ಚನೇ ಆಗಿಹೋದ (3)

### 31-08-2017ರ ಉತ್ತರಗಳು

ಎಡದಿಂದ ಬಲಕ್ಕೆ :
1. ಸಂಭಾವಿತ ; 3. ಕರಾಗ್ರ ; 4. ರುಸುಮು ; 6. ಹರಿವಾಣ ; 7. ಅಂಬುಧಿ ; 9. ಸಾಗರ ; 11. ಶಬರ ; 13. ಸಹನೆ ; 15. ಅಭಿಷೇಕ ; 17. ರಮಿಸು ; 18. ಕರುಣೆ ; 19. ರಮ್ಯಭಾವ

ಮೇಲಿಂದ ಕೆಳಕ್ಕೆ :
1. ಸಂಗ್ರಹ ; 2. ತರುಣ ; 3. ಕರುಬು ; 5. ಮುರುಗ ; 7. ಅಂಕುಶ ; 8. ಧಿಕ್ಕಾರ ; 9. ಸಾಹಸ ; 10. ರವಾನೆ ; 12. ಬವರ ; 14. ಹರಿಣಿ ; 15. ಅಸುರ ; 16. ಕಕವ

# ವರ್ಣಮಯ ಮಂಗಗಳು ಇವೆಯೇ?

ಹೌದು, ಖಂಡಿತ ಇವೆ. ನಾವು ನಮ್ಮ ನಡುವೆಯೇ ಅತ್ಯಂತ ಸಾಮಾನ್ಯವಾಗಿ ನೋಡಬಹುದಾದ ಕೆಂಪು ಮುಖದ, ಕಂದು ಶರೀರದ "ರೀಸಸ್ ಮೆಕಾಕ್"ಗಿಂತ ಬಹಳ ವಿಭಿನ್ನವಾಗಿ ಅತ್ಯಾಕರ್ಷಕ ಏಕ ವರ್ಣದ ಮತ್ತು ಬಹು ವರ್ಣಗಳ ಅಲಂಕರಣ ಪಡೆದಿರುವ ಮಂಗ ವಿಧಗಳು ಕೆಲವು ಇವೆ. ಹಾಗೆ ಅತ್ಯಂತ ವರ್ಣಮಯವಾಗಿರುವ ಮಂಗಗಳ ಮೂರು ವಿಧಗಳು :

* ಗೋಲ್ಡನ್ ಲಂಗೂರ್ : ನಮ್ಮ ಹಿಮಾಲಯದ ತಪ್ಪಲಿನ ಅಡವಿ ಪ್ರದೇಶಗಳಲ್ಲಿರುವ ಈ ಮಂಗದ್ದು ( ಚಿತ್ರ1 ) ಅತ್ಯಂತ ಆಕರ್ಷಕ ಬಂಗಾರ ವರ್ಣ. ಸಾಮಾನ್ಯವಾಗಿ ಎಂಟರಿಂದ ಹತ್ತು ಸದಸ್ಯರ ತಂಡಗಳಲ್ಲಿ ಬದುಕುವ ಈ ಮಂಗದ್ದು ಕಡುಗಪ್ಪು ಮುಖ. ಉಳಿದಂತೆ ಇಡೀ ಮೈಯನ್ನು ದಟ್ಟವಾಗಿ ಆವರಿಸಿದ ಉದ್ದುದ್ದ ರೋಮ ರಾಶಿಯದು ಬಹು ಸುಂದರ ಹೊಂಬಣ್ಣ. ಸಾಧಾರಣ ದೇಹ ಗಾತ್ರದ ಈ ಮಂಗ ಕಟ್ಟಾ ಸಸ್ಯಾಹಾರಿ. ಭಾರತದಲ್ಲಿರುವ ಮಂಗ ಪ್ರಭೇದಗಳಲ್ಲೆಲ್ಲ ಅತ್ಯಲ್ಪ ಸಂಖ್ಯೆಯಲ್ಲಿರುವ ಈ ಮಂಗ ಅಳಿದುಹೋಗುವ ಗರಿಷ್ಠ ಅಪಾಯದಲ್ಲಿದೆ ಕೂಡ.




* ರೆಡ್ ಶಾಂಕ್ಡ್ ಡೌಕ್ ಲಂಗೂರ್ : ಪರಮ ವಿಸ್ಮಯ ಸ್ವರೂಪದ, ಬಹುವರ್ಣಾಲಂಕೃತವಾದ ಈ ಮಂಗ "ವೇಷ ಭೂಷಿತ ಮಂಗ" ಎಂದೇ ವಿಖ್ಯಾತ ( ಚಿತ್ರ1). ಬಂಗಾರ ವರ್ಣದ ಮುಖ, ನೀಲಿ ಬಣ್ಣದ ರಪ್ಪೆಗಳು, ಬಿಳಿ ಕೂದಲುಗಳ ಗಡ್ಡಮೀಸೆ, ಕತ್ತಿನಿಂದ ಎದೆಮೊಳಕೈಗಳವರೆಗೆ ಕಪ್ಪು, ಹೊಟ್ಟೆ ಮುಂಗೈಗಳು ಬಿಳುಪು, ಮಂಡಿಯಿಂದ ಪಾದದವರೆಗೆ ಗಾಢ ಕೆಂಪುಕಂದು, ಕಪ್ಪಾದ ಹಸ್ತಪಾದಗಳು..... ಒಟ್ಟಾರೆ ನೋಡಿದೊಡನೆಯೇ ವಿಸ್ಮಯಗೊಳಿಸುವ ವರ್ಣಾಲಂಕರಣ ( ಚಿತ್ರ1 ರಲ್ಲಿ ಗಮನಿಸಿ ). ವಿಯಟ್ನಾಂ, ಲಾವೋಸ್, ಕಾಂಬೋಡಿಯಾಗಳ ಅಡವಿಗಳ ಈ ವೃಕ್ಷ ವಾಸಿಯದು ಎರಡಡಿ ಉದ್ದದ ಶರೀರ, ಹತ್ತು ಕಿಲೋ ತೂಕ. ಸರಾಸರಿ ಹತ್ತುಹದಿನೈದು ಸದಸ್ಯರ ಗುಂಪುಗಳಲ್ಲಿ ವಾಸಿಸುವ ಈ ಮಂಗ ಕೂಡ ಕಟ್ಟಾ ಸಸ್ಯಾಹಾರಿ. ಇದೂ ಅಳಿವ ಹಾದಿ ಹಿಡಿದಿದೆ.

* ಮ್ಯಾಂಡ್ರಿಲ್ : ಧರೆಯ "ಅತ್ಯಂತ ಬೃಹದ್ಗಾತ್ರದ ಮಂಗ" ಎಂಬ ದಾಖಲೆಯ ಮ್ಯಾಂಡ್ರಿಲ್ ಅತ್ಯಂತ ಗಾಢ ಬಹು ವರ್ಣಗಳ ಮುಖಾಲಂಕೃತ ಮಂಗ ಎಂದೂ ಪ್ರಸಿದ್ಧವಾಗಿದೆ ( ಚಿತ್ರ2 ). ದಷ್ಟ ಪುಷ್ಟ ಶರೀರದ, 40 ರಿಂದ 50 ಕಿಲೋ ವರೆಗಿನ ತೂಕ ತಲುಪುವ ಈ ಮಂಗ ಆಫ್ರಿಕ ಖಂಡದ ಕಾಂಗೊ, ಗೆಬಾನ್, ಗಿನಿ ಮತ್ತು ಕ್ಯಾಮರೂನ್ ದೇಶಗಳ ವೃಷ್ಟಿವನ ವಾಸಿ. ಗಾಢ ಕಂದು ಬಣ್ಣದ ರೋಮಭರಿತ ಶರೀರ, ರೋಮರಹಿತ ಮುಖದಲ್ಲಿ ಬಿಳಿಕೆಂಪು ಪಟ್ಟೆನಾಮ ಹಚ್ಚಿದಂತಹ ಅಲಂಕಾರ ( ಚಿತ್ರದಲ್ಲಿ ಗಮನಿಸಿ). ಅದರಿಂದಾಗಿಯೇ ಇದು "ಮೂರು ನಾಮದ ಕೋತಿ" ಎಂದೂ ವಿಖ್ಯಾತ. ಪೃಷ್ಠ ಭಾಗವೂ ಅಷ್ಟೇ ವರ್ಣಾಲಂಕೃತ. 30 ವರ್ಷಗಳ ದೀರ್ಘ ಆಯುಷ್ಯದ ಈ ಬಲಿಷ್ಠ ಮಂಗ ಮಿಶ್ರಾಹಾರಿ ; ಸರಾಸರಿ ಆರು ನೂರು ಸದಸ್ಯರ ಬೃಹತ್ ಹಿಂಡುಗಳಲ್ಲಿ ಜೀವನ ! ಹಾಗಿದ್ದೂ ಅರಣ್ಯ ನಾಶದಿಂದಾಗಿ ಈ ಮಂಗವೂ ಪ್ರಸ್ತುತ ಅಲ್ಪ ಸಂಖ್ಯಾತ.

■ ಎನ್. ವಾಸುದೇವ್